ದೊಡ್ಡಪ್ಪನಿಗೆ ದೂರು ಕೊಡುತ್ತಾರೆ. ಇದು ನಿಜವೇ ಎಂದು ರಾಮಚಂದ್ರನನ್ನು ದೊಡ್ಡಪ್ಪ ಪ್ರಶ್ನಿಸಿದಾಗ – ''ಹೌದು ದೊಡ್ಡಪ್ಪ, ನಂಗೆ ಕುಣಿಯೋ ಹೇಳಿ ಕಾಣ್ತು'' ಎಂಬ ಉತ್ತರ ಬರುತ್ತದೆ. ಆಗ ದೊಡ್ಡಪ್ಪ ಓದು ಬರಹ ಬಿಟ್ಟು ಯಕ್ಷಗಾನ ಸೇರಿ ಈ ಹುಡುಗ ಹಾಳಾಗಿ ಹೋಗುತ್ತಾನೆ ಎಂದು ರಾಮಚಂದ್ರನನ್ನು ಹೊಡೆದು, ಬಡಿದು ಶಿಕ್ಷಿಸುತ್ತಾರೆ. ಇದಾದ ನಂತರ ಪಕ್ಕದ ಊರಲ್ಲಿ ಒಂದು ರಾತ್ರಿ ಎಲ್ಲೋ ಯಕ್ಷಗಾನ ನಡೆಯುವಾಗ ಒಬ್ಬ ಕಲಾವಿದ ಇಲ್ಲದ ಕಾರಣ ರಾಮಚಂದ್ರನನ್ನು ವೇಷಹಾಕಿಸಿ ರಂಗಸ್ಥಳಕ್ಕೆ ಕಳಿಸಿಬಿಡುತ್ತಾರೆ. ಅಂದು ಮನಃಪೂರ್ತಿ ಕುಣಿದಾಡಿದ ಆ ಬಾಲಕನನ್ನು ಊರಿಗೆ ಊರೇ ಕೊಂಡಾಡುತ್ತದೆ. ಕುಣಿತ ಮುಗಿಸುವ ಹೊತ್ತಿಗೆ ರಾಮಚಂದ್ರನಿಗೆ ತನ್ನ ದೊಡ್ಡಪ್ಪ ಪ್ರೇಕ್ಷಕರ ಮೊದಲನೇ ಸಾಲಿನಲ್ಲಿ ಕುಳಿತಿರುವುದು ಅರಿವಿಗೆ ಬರುತ್ತದೆ. 'ಇನ್ನು ನಾನು ಸತ್ತೆ' ಎಂದುಕೊಳ್ಳುತ್ತಾನೆ ಬಾಲಕ ಚಿಟ್ಟಾಣಿ. ಮರುದಿನ ಬೆಳಗ್ಗೆ ಆಸರಿಗೆ ಕೂತಾಗ ದೊಡ್ಡಪ್ಪ, ''ಬಾ ಇಲ್ಲಿ ರಾಮಚಂದ್ರ'' ಎಂದು ಕರೆದಾಗ ರಾಮಚಂದ್ರ ಸಹಜವಾಗಿಯೇ ಹೆದರಿದ. ಆದರೆ, ದೊಡ್ಡಪ್ಪ ಹೇಳಿದರಂತೆ, ''ಬಾ, ಹೊಡೆಯುವುದಿಲ್ಲ. ನೀನು ಯಕ್ಷಗಾನ ಕುಣಿ, ಒಳ್ಳೆಯದಾಗಲಿ''. ಹಿರಿಯರು ಹೀಗೆ ಬೆಂಬಲಿಸದೆ ಹೋಗಿದ್ದರೆ ಚಿಟ್ಟಾಣಿಯವರಂಥ ಅಭಿಜಾತ ಕಲಾವಿದ ಯಕ್ಷಗಾನಕ್ಕೆ ಸಿಗುತ್ತಿರಲಿಲ್ಲ.



ಮಕ್ಕಳಿಗೆ ಪೂರಕ ವಾತಾವರಣ ಸೃಷ್ಟಿಸುವುದು ಮುಖ್ಯ. ನಿಮ್ಮ ಮಗು ಸಾಫ್ಟ್‌ವೇರ್ ಎಂಜಿನಿಯರ್ ಆಗಬೇಕು ಎಂಬ ಹಂಬಲ ನಿಮಗೆ ಇದ್ದಲ್ಲಿ ಮಗುವಿಗೆ ಬೇಸಿಗೆಯಲ್ಲಿ ಶಾರ್ಟ್ ಟರ್ಮ್ ಕೋಡಿಂಗ್ ಭಾಷಾ ಕೋರ್ಸ್‌ಗೆ ಸೇರಿಸುವುದು ಉತ್ತಮ ಮಾರ್ಗವಾಗಿದೆ. ನಿಮ್ಮ ಮಗು ಕೋಡ್ ಮಾಡಲು ಇಷ್ಟಪಡುತ್ತದೆಯೇ ಎಂದು ನೋಡಿ. ಕಂಪ್ಯೂಟರ್ ಎಂಜಿನಿಯರ್ ತಾರ್ಕಿಕ ಕೌಶಲ್ಯಗಳನ್ನು ಹೊಂದಿರಬೇಕು ಮತ್ತು ಕೋಡಿಂಗ್ ಬಗ್ಗೆ ಉತ್ಸಾಹ ಹೊಂದಿರಬೇಕು. ನಿಮ್ಮ ಮಗುವಿಗೆ ಒಂದು ನಿರ್ದಿಷ್ಟ ವೃತ್ತಿಜೀವನದಲ್ಲಿ ಅಗತ್ಯವಿರುವ ಕೌಶಲ್ಯದ ಸೆಟ್‌ಗಳ ಬಗ್ಗೆ ಅರ್ಥವಾಗುವಂತೆ ತರಬೇತಿ ನೀಡಬೇಕಾಗುತ್ತದೆ. ಸಾಫ್ಟ್‌ವೇರ್ ಎಂಜಿನಿಯರಿಂಗ್‌ನ ಎಲ್ಲಾ ಸಂಭಾವ್ಯ ಅಂಶಗಳನ್ನು ಪರಿಚಯಿಸಿದ ನಂತರ, ಮಗು ತನ್ನದೇ ಆದ ಆಯ್ಕೆ ಮಾಡಿಕೊಳ್ಳಲು ಸಾಧ್ಯ.